# ಅದ್ವಿತೀಯ ವಾಸ್ತುಶಿಲ್ಪದ ದೇಗುಲ

ಪೆರೂರ್ ಪತೀಶ್ವರರ್ ದೇವಸ್ಥಾನವು ತಮಿಳುನಾಡಿನ ಕೊಯಮತ್ತೂರಿನ ಪಶ್ಚಿಮ ಭಾಗದಲ್ಲಿರುವ ಪೆರೂರ್‌ನಲ್ಲಿರುವ ಶಿವನಿಗೆ ಅರ್ಪಿತವಾದ ಹಿಂದೂ ದೇವಾಲಯವಾಗಿದ್ದು, ಇದನ್ನು ಸುಮಾರು 2ನೇ ಶತಮಾನದಲ್ಲಿ ಕರಿಕಾಲ ಚೋಳನು ನಿರ್ಮಿಸಿದ. ಪಟ್ಟೀಶ್ವರರ್ ಎಂದು ಕರೆಯಲ್ಪಡುವ ಶಿವನು, ಪಚ್ಚೇನಾಯಕಿ ಎಂದು ಕರೆಯಲ್ಪಡುವ ತನ್ನ ಪತ್ನಿ ಪಾರ್ವತಿಯೊಂದಿಗೆ ಇಲ್ಲಿ ನೆಲೆಸಿದ್ದಾನೆ ಎಂಬ ಐತಿಹ್ಯವಿದ್ದು, ಈ ಕಾರಣಕ್ಕೆ ಇಲ್ಲಿನ ದೇವಸ್ಥಾನದಲ್ಲಿ ದೇವರನ್ನು ಸ್ವಯಂಭುಲಿಂಗವೆಂದು ನಂಬಲಾಗಿದೆ.

ಈ ದೇವಾಲಯವು ಹಲವಾರು ಗೋಪುರಗಳು ಮತ್ತು ಸಭಾಂಗಣಗಳನ್ನು ಹೊಂದಿದೆ. ಈ ದೇವಾಲಯದ ಸೀಲಿಂಗ್ ಅನ್ನು ಕಲ್ಲಿನ ಸರಪಳಿಗಳ ಜಾಲದಿಂದ ಮುಚ್ಚಲಾಗಿದೆ. ಇಲ್ಲಿ ಶಿವನು ತನ್ನ ತಾಂಡವವನ್ನು ಮಾಡಿದನೆಂಬ ಪ್ರತೀತಿಯಿದೆ.

ಈ ದೇವಾಲಯದ ಸ್ತಂಭಗಳನ್ನು ಶಿವನ ವಿವಿಧ ರೂಪಗಳಲ್ಲಿನ ಕೆತ್ತನೆಗಳಿಂದ ಅಲಂಕರಿಸಲಾಗಿದೆ. ಇಲ್ಲಿನ ವಾಸ್ತುಶಿಲ್ಪ ಅದ್ವಿತೀಯವಾಗಿದ್ದು ಪುರಾಣ ಪ್ರಸಿದ್ಧ ಸಂಗತಿಗಳನ್ನು ತಿಳಿಯ ಹೇಳುತ್ತದೆ. ಈ ದೇವಾಲಯದ ಕಂಬವೊಂದರ ಮೇಲೆ ಕೆತ್ತಲಾಗಿರುವ ಚಿತ್ರವೊಂದು ವಯೋವೃದ್ಧನೊಬ್ಬ ನೃತ್ಯ ಮಾಡುತ್ತಿರುವ (ಕಂಬದ ಮಗ್ಗುಲಿನಲ್ಲಿ ನೃತ್ಯಭಂಗಿಯ ಹೆಣ್ಣಿನ ಕೆತ್ತನೆಯಿದೆ) ತರುಣಿಯನ್ನು ಕಾಮುಕ ದೃಷ್ಟಿಯಿಂದ ನೋಡುತ್ತಿರುವ ಭಂಗಿಯ ಕೆತ್ತನೆ ಸುಂದರವಾಗಿ ಮೂಡಿಬಂದಿದೆ. ವಯೋಸಹಜ ವೃದ್ಧಾಪ್ಯದಲ್ಲೂ ಮಾನವನಲ್ಲಿನ ಮನೋಸಹಜ ಚಂಚಲತೆಯನ್ನು ಸೊಗಸಾಗಿ ಚಿತ್ರಿಸಲಾಗಿದೆ.

—ಎಸ್. ಪ್ರಭಾವತಿ, ಬೆಂಗಳೂರು





# ಹೂವಿನ ಮಗ್ಗ

ಚಿತ್ರದಲ್ಲಿ ಕಾಣುತ್ತಿರುವುದು ಹಳೆಯ ಕಾಲದ ಮರದ ಹೂವಿನ ಮಗ್ಗ. ನಮ್ಮಮ್ಮ ಕಾಡಿನಲ್ಲಿ ಸಿಗುತ್ತಿದ್ದ ಬಳ್ಳಿಯಿಂದ ಹೂವಿನಾಕಾರದ ಚಾಪೆ, ಅಲಂಕಾರಿಕವಾಗಿ ಬಳಸಬಹುದಾದ ತೂಗಾಡುವ ಹೂಗಳ ಬಳ್ಳಿಗಳನ್ನು ಹೆಣೆಯುತ್ತಿದ್ದರು. ಅವುಗಳು ಹಲವಾರು ವರ್ಷಗಳವರೆಗೆ ಬಾಳಿಕೆ ಬರುತ್ತಿದ್ದವು. ಈಗ ಪವರ್ ಲೂಮ್ ಹೆಸರಿನಿಂದ ಇವುಗಳ ಸ್ಥಾನವನ್ನು ಪ್ಲಾಸ್ಟಿಕ್‌ನ ಸಣ್ಣ ಸಣ್ಣ ರಚನೆಗಳು ಪಡೆದುಕೊಂಡಿದ್ದು, ಬೆತ್ತದಿಂದ ಬುಟ್ಟಿ ಹೆಣೆಯುವಂತೆ, ಬಳ್ಳಿಯಿಂದ ಚಾಪೆ, ಹೂ ಬಳ್ಳಿಗಳ ಹೆಣೆಯುವಿಕೆ ಮಾಯವಾಗಿದೆ. ಪ್ಲಾಸ್ಟಿಕ್‌ನ ಬಾಗಬಹುದಾದ ತಂತಿಯಂತಹ ದಾರಗಳಿಂದ ಸಣ್ಣ ಸಣ್ಣ ರಚನೆಗಳನ್ನು ವಿರಳವಾಗಿ ಕುಶಲಕರ್ಮಿಗಳು, ಆಸಕ್ತ ಮಹಿಳೆಯರು ಮಾಡುತ್ತಾರೆ. ಚಿತ್ರದಲ್ಲಿ ಕಾಣುತ್ತಿರುವ ಈ ಮರದ ಮಗ್ಗವೀಗ ಅಟ್ಟ ಸೇರಿದೆ.

—ಎಸ್.ಎನ್. ಚಂದ್ರಕಲಾ ಕೊಪ್ಪ

# ಎರಡು ಬಾಲದ ಹಲ್ಲಿ

ಎರಡು ಬಾಲದ ಹಲ್ಲಿಯ ಬಗ್ಗೆ ಈ ಹಿಂದೆ ಕೇಳಿದ್ದೆ, ಚಿತ್ರದಲ್ಲಿ ನೋಡಿದ್ದೆ. ಆದರೆ ಮೊನ್ನೆ ಸ್ನೇಹಿತನ ಮನೆಯಲ್ಲಿ ಪ್ರತ್ಯಕ್ಷವಾಗಿ ನೋಡಿದೆ. ಗೆಳೆಯ ರಾಜು ತನ್ನ ಮನೆಯ ಅಡುಗೆ ಮನೆಯಲ್ಲಿ ಇದನ್ನು ಕಂಡು, ನನಗೆ ತಿಳಿಸಿದ. ಕಳೆದ ಮೂರು ದಿನದಿಂದ ನಮ್ಮ ಮನೆಯಲ್ಲೇ ಇದೆ ಎಂದೂ ಹೇಳಿದ. ಸಹಜವಾಗಿ ಕಾಣುವ ಒಂದು ಬಾಲದ ಹಲ್ಲಿಗಳ ನಡುವೆ ಇದು ವಿಶೇಷವೆನಿಸಿತು. ಸೃಷ್ಟಿಯ ವೈಚಿತ್ರ್ಯದಲ್ಲಿ ಇದೂ ಒಂದು ಎನಿಸಿತು. ವೈಜ್ಞಾನಿಕವಾಗಿ ಇದು ವಿಚಿತ್ರವಲ್ಲ ಎಂದೂ ನಂತರ ತಿಳಿಯಿತು. ಹಲ್ಲಿಗಳ ಮೇಲೆ ಪರಭಕ್ಷಕಗಳು ದಾಳಿ ನಡೆಸಿದಾಗ, ಹಲ್ಲಿಗಳು ತಪ್ಪಿಸಿಕೊಳ್ಳಲು ತಮ್ಮ ಬಾಲವನ್ನು ಉದುರಿಸುತ್ತವೆ. ಉದುರಿದ ಬಾಲ ಒದ್ದಾಡುತ್ತಿರುತ್ತದೆ. ಇದನ್ನು ಗಮನಿಸಿ ಪರಭಕ್ಷಕವು ಅದರತ್ತಲೇ ಹೋಗುತ್ತದೆ. ಇದೇ ಸಮಯದಲ್ಲಿ ಹಲ್ಲಿ ತಪ್ಪಿಸಿಕೊಳ್ಳುತ್ತದೆ. ಹಲ್ಲಿಯ ಉದುರಿದ ಬಾಲದ ಜೊತೆ ಪಕ್ಕವೇ ಮತ್ತೊಂದು ಬಾಲವು ಬೆಳೆಯುತ್ತದೆ. ಹೀಗೆ ಒಂದೇ ಹಲ್ಲಿಗೆ ಆರು ಬಾಲಗಳು ಬೆಳೆದ ನಿದರ್ಶನಗಳು ಇವೆ ಎಂಬ ಮಾಹಿತಿಯನ್ನು ಗೂಗಲ್ ಒದಗಿಸಿತು.

—ಈರಣ್ಣ ಬೆಂಗಾಲಿ, ರಾಯಚೂರು

